ಸ್ 1908—09ನೆ ಇಸವಿ ಮಿ॥ ನಂಬರ್ 965

ಬಂಗಳೂರು ತಾಲ್ಲೂಕು ಹೊರಮಾವು ಅಗರದಲ್ಲಿದ್ದು ಫವತಿಪಟ್ಟ ಶಂಕರರಡ್ಡಿಯ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಸದರಿ ವೂರಿನಲ್ಲಿರುವ ಸಂಜೀವರಡ್ಡಿ ಹೆಂಡತಿ ಸಂಜೀವಮ್ಮನಿಗೆ ಮೃತಪಟ್ಟ ಶಂಕರರಡ್ಡಿಗೆ ಮುಖ್ಯ ವಾರಸ್ದಾರಳು ಆಗಬೇಕೆಂಬ ಹಕ್ಕು ದಾರಿ ಮೇಲೆ ಹೊರಮಾವು ಸ್ಥಳದಲ್ಲಿ ವಾಸಸ್ಥರಾಗಿ ಮೃತಪಟ್ಟ ಶಂಕರರಡ್ಡಿ ಜಿಂದಗಿ ಬಗ್ಯಾಗಿ ಬರತಕ್ಕ 590 ರೂಪಾಯಿಗಳನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ನ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸಂಜೀವಮ್ಮನ ಅರ್ಜಿಯನ್ನು 1909ನೆ ಇಸವಿ ಜುಲೈ 30ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಂಕರರಡ್ಡಿ ಆಸ್ತಿಗೆ ಹಕ್ಕು ದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರಿರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ 1909ನೆ ಇಸವಿ ಜುಲೈ 12ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ 1908—09ನೆ ಇಸವಿ ಮಿ॥ ನಂಬರ್ 971.

ಬೆಂಗಳೂರು ಚಿಕ್ಕಮಾವಹಳ್ಳಿಲಿದ್ದು ಫವತಿಪಟ್ಟ ವೆಂಕಟಶಾಮಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಚಿಕ್ಕಮಾವಹಳ್ಳಿಲಿರುವ 1ನೆ ಮುನಿಶಾಮಪ್ಪನ ಹೆಂಡತಿ ಮುನಿಹನುಮಕ್ಕ, 2ನೆ ಮುನಿಯಮ್ಮ 3ನೆ ರಾಮಸ್ವಾಮಪ್ಪ ವೈನರ್, ಗಾರ್ಡಿಯರ್ 1ನೆ ಮುನಿಹನುಮಕ್ಕನು ಸದರಿ ಮೃತಪಟ್ಟ ವೆಂಕಟಶಾಮಪ್ಪನಿಗೆ ಮುಖ್ಯ ವಾರಸ್ದಾರು ಆಗಬೇಕೆಂಬ ಹಕ್ಕು ದಾರಿ ಮೇಲೆ ಚಿಕ್ಕಮಾವಹಳ್ಳಿಲಿ ವಾಸಸ್ಥರಾಗಿ ಮೃತಪಟ್ಟ ವೆಂಕಟಶಾಮಪ್ಪನಿಗೆ ಬರತಕ್ಕ 924 ರೂಪಾಯಿಗಳನ್ನು ವಸೂಲು ಮಾಡಿಕೊಳ್ಳಲು ವಾರಸ್ ಸರ್ಟಿಫಿಕೇಟ್ ಬಗ್ಯೆ 1901ನೆ ಇಸವಿ 7ನೆ ರೆಗ್ಯುಲೇಷ್ನ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಮುನಿಹನುಮಕ್ಕ ವಗ್ಯೈರೇರ ಅರ್ಜಿಯನ್ನು 1909ನೆ ಇಸವಿ ಜುಲೈ 30ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟಶಾಮಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ 1909ನೆ ಇಸವಿ ಜುಲೈ ತಿಂಗಳು 12ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ 1908—09ನೆ ಇಸವಿ ಮಿ॥ ನಂಬರ್ 984.

ಬೆಂಗಳೂರು ಕಂಟ್ರೋಲರ್ಸ್ ಆಫೀಸಿನಲ್ಲಿ ಕ್ಲರ್ಕ್ ಆಗಿದ್ದು ಫವತಿಪಟ್ಟ ಕೃಷ್ಣರಾವು ಆಸ್ತೀ ವಿಷಯದಲ್ಲಿ—

ಅರ್ಜೀದಾರು ತರೀಕೆರೆ ತಾಲ್ಲೂಕು ಅಜ್ಜಂಪುರದ ಶ್ಯಾನುಭಾಗ ವೆಂಕಟಕೃಷ್ಣಪ್ಪನವರ ಮನೇಲಿರುವ ಲಕ್ಷ್ಮಿದೇವಮ್ಮನು ಮೃತಪಟ್ಟ ಸದರೀ ಕೃಷ್ಣರಾವ್‌ಗೆ ಮುಖ್ಯ ವಾರಸುದಾರಳು ಆಗಬೇಕೆಂಬ ಹಕ್ಕು ದಾರಿಮೇಲೆ ಬೆಂಗಳೂರಲ್ಲಿ ವಾಸಸ್ಥರಾಗಿ ಮೃತಪಟ್ಟ ಕೃಷ್ಣರಾವ್ ಜಿಂದಗಿ ಬಗ್ಯಾಗಿ ಬರತಕ್ಕ 739—0—0 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳಲು ವಾರಸ್ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರಳಾದ ಲಕ್ಷ್ಮಿದೇವಮ್ಮನ ಅರ್ಜಿಯನ್ನು ಸ್ 1909ನೆ ಇಸವಿ ಜುಲೈ 23ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೃಷ್ಣರಾವ್ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ 1909ನೆ ಇಸವಿ ಜುಲೈ ತಿಂಗಳು 12ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ಇ. ಜಯರಾಮ್ಮಯ್ಯರ್,
ಸಬ್ ಜಡ್ಜ್.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರ್ಸ್ ಆಫೀಸಿನಿಂದ.

ನೋಟಿಸ್.

ತಾರೀಖು 5ನೆ ಜುಲೈ 1909ನೆ ಇಸವಿ.

ಸಿಟಿ ಮಜಕೂರಿನಲ್ಲಿ ಇರುವ ಸಾಬೆ, ಇದ್ದಲು, ವಗ್ಯೆರೆ ಮಾರ್ಜಿನ್ನಲ್ಲಿ ಕಂಡ ಲೈಸೆನ್ಸು ಬಾಬಿನ ಅಂಗಡಿಗಳು ಇಟ್ಟಿರುವವರಿಗೆ ತಿಳಿಯಪಡಿಸುವದೇನಂದರೆ :—

1. ಸವುದೇ ಅಂಗಡಿ.
2. ಇದ್ದಲು ಅಂಗಡಿ.
3. ಬಾಣದ ಅಂಗಡಿ.
4. ಕಸಾಯಿ ಅಂಗಡಿ.
5. ಶೀಮೆ ಎಣ್ಣೆ ಅಂಗಡಿ.
6. ಕರ್ಪೂರದ ಬಟ್ಟಿ.
7. ನೀಲಿ ಕಾರ್ಖಾನೆ.

ಸ್ 1909-1910ನೆ ಸಾಲಿಗೆ ಆಯಾ ಬಾಬಿನ ಅಂಗಡಿ ಇಟ್ಟಿರತಕ್ಕವರು ಈ ಲಾಗಾಯಿತು 8 ದಿನಗಳೊಳಗಾಗಿ ಗೊತ್ತಾಗಿ ಇರುವ ಫೀಜನ್ನು ಮ್ಯುನಿಸಿಪಲ್ ಆಫೀಸಿಗೆ ಪಾವತಿಮಾಡಿ ಲೈಸೆನ್ಸು ಪಡಿಯಬೇಕು. ಫೀಜನ್ನು ವಸೂಲ್ ಮಾಡುವದಕ್ಕಾಗಿ ಅಲಾಯಿದಾ ಇಂಟಿಮೇಷ್ನ್ ನೋಟೀಸು ವಗ್ಯೆರೆ ಕೊಡುವುದಿಲ್ಲ. ಮೇಲ್ಕಂಡಂತೆ ವಾಯಿದೆ ಒಳಗೆ ಪೀಸು ಪಾವತಿಮಾಡಿ ಲೈಸೆನ್ಸು ಪಡಿಯದೆ ತಪ್ಪಿದ ದುಕಾಂದಾರನನ್ನು ಮತ್ಯಾವ ತಿಳುವಳಿಕೆಯನ್ನೂ ಕೊಡದೆ ರೂಲ್ಸು ಪ್ರಕಾರ ಪ್ರಾಸಿಕ್ಯೂಷ್ನ ಮಾಡಲ್ಪಡುತ್ತೆ.

2. ಪ್ರತಿ ಬಂದು ಅಂಗಡೀದಾರು ಅಂಗಡಿ ಇಟ್ಟು ಇರುವ ಬೀದಿ ಡೋರು ನಂಬರು ಮತ್ತು ಅವರ ಹೆಸರು ಸಹಾ ಚನ್ನಾಗಿ ತಿಳಿಯುವಂತೆ ಬರಹಮೂಲಕವಾದ ಬಂಸು ಬೋರ್ಡು ಅಂಗಡಿ ಮುಂಭಾಗದಲ್ಲಿ ಹಾಕಬೇಕು. ಸವುದೆ ಅಂಗಡಿಯವರು ಲೈಸೆನ್ಸು ಷರತ್ತು ಪ್ರಕಾರ ಪಬ್ಲಿಕ್ ರಸ್ತೆಯಲ್ಲಿ ಜನಗಳಿಗೆ ತೊಂದರೆಯಾಗುವಂತೆ ಸವುದೆ ಹಾಕದೇಲೂ ಲೈಸೆನ್ಸು ಪಡೆಯದೇಲೂ ಮತ್ತು ಭಂಡಿಗಳನ್ನು ನಿಲ್ಲಿಸದೇಲೂ ಸಹ ಇರಕೂಡದು. ಇದಕ್ಕೆ ವಿರೋಧವಾಗಿ ನಡಿಯುತ್ತಾರೆಂದು ತಿಳಿದುಬಂದಲ್ಲಿ ಆ ಕೂಡ್ಲೆ ಸಂಬಂಧಪಟ್ಟ ದುಕಾನುಗಳ ಲೈಸೆನ್ಸುಗಳನ್ನು ರದ್ದುಮಾಡುತ್ತೆ.

3. ಆಜೂಬಾಜೂ ಮನೆಗಳ ವಾಸಸ್ಥರಿಗೆ ಅಪಾಯವಿಲ್ಲದಂತೆಯೂ ಅಂಗಡೀವೊಳಗೇನೆ ಸವುದೆ ಜವುಯಿಸುವುದಕ್ಕೂ ಹೊಡೆಯುವುದಕ್ಕೂ ವಿಸ್ತಾರವಾದ ಖಾಲೀಜಾಗಾ ಇರತಕ್ಕ ಅಂಗಡಿಗಳನ್ನು ಮಾತ್ರವೇ ಬಹಲು' ಇಡುತ್ತೆ ಮಿಕ್ಕವುಗಳನ್ನು ವಜಾ ಮಾಡುತ್ತೆ.

4. ಹೊಸದಾಗಿ ಮೇಲ್ಕಂಡ ಬಾಬಿನ ಅಂಗಡಿಗಳನ್ನು ಇಡತಕ್ಕವರು ಕ್ರಮವಾಗಿ ಅರ್ಜಿಯನ್ನು ಹಾಜರ್ಮಾಡಿ ವಂಜೂರ್ ಆರ್ಡರ್ ಪಡದ ಮೇಲೆಯೇ ಅಂಗಡಿಗಳನ್ನು ಇಟ್ಟುಕೊಳ್ಳಬೇಕೇ ಹೊರ್ತು ಬಗರ್ ಹುಕುಂ ಬಿಲ್‌ಖುಲ್ ಅಂಗಡಿ ಇಡಕೂಡದು. ಹಾಗೆ ಲೈಸೆನ್ಸು ಪಡೆಯುವುದಕ್ಕೆ ಮುಂಚೆ ಅಂಗಡಿ ಇಟ್ಟಲ್ಲಿ ರೂಲ್ಸು ಪ್ರಕಾರ ಅಂಗಡಿ ಮುಚ್ಚಿಸಿ ಅಂಗಡೀದಾರನನ್ನು ಪ್ರಾಸಿಕ್ಯೂಷನ್ ಮಾಡುತ್ತೆ.

ಎಸ್. ಸುಬ್ಬರಾವ್,
ವೈಸ್ ಪ್ರೆಸಿಡೆಂಟ್.

ನೋಟಿಸು.

ಚಿತ್ರದುರ್ಗ ಡಿಸ್ಟ್ರಿಕ್ಟು ಹೊಳಲ್ಕೆರೆ ತಾಲ್ಲೂಕು ಹೊಳಲ್ಕೆರೆ ಕಸಬಾದಲ್ಲಿ ಇರುವ ಲೋಕದಹೊಳಲು ಸಂಗನ ಬಸಪ್ಪನವರ ಮಕ್ಕಳು ಕಲ್ಲಪ್ಪನವರು ಸರ್ವೇ ಸಮಸ್ತರಿಗು ಮೈಸೂರು ಗವರ್ಮೆಂಟ್ ಗೆಜೆಟ್ಟಿನ ಮೂಲಕ ಪ್ರಸಿದ್ಧಪಡಿಸುವದೇನಂದರೆ— ನನ್ನ ಖಾಸಾ ಮಗ ಸುಮಾರು 18, 19 ವರುಷ ವಯಸ್ಸಿನ ಮಹೇಶ್ವರಪ್ಪನೆಂಬುವ ಹುಡುಗನು ಈಗ ಸುಮಾರು 2-3 ವರುಷದ ಲಾಗಾಯಿತು ಕೆಟ್ಟ ಜನಗಳ ಸಹವಾಸಕ್ಕೆ ಬಿದ್ದು ಸುಮಾರು ಎಂಡು ಮೂರು ನೂರು ರೂಪಾಯಿಗಳ ಸಾಲ ಮಾಡಿಕೊಂಡು ಕೆಟ್ಟು ಕೆಲಸಗಳಿಗೆ ಪ್ರವರ್ತಿಸಿ ಇರುತ್ತಾನೆ. ಸದರಿ ಮಹೇಶ್ವರಪ್ಪನಿಗೆ ಯಾರಾದರೂ ಸಾಲ ವಗೈರೆ ಕೊಡಕೂಡದು ಹಾಗೇನಾದರೂ ಹಿಂದೆ ಕೊಟ್ಟಿದ್ದೆ ಆದರೆ ಮುಂದೆ ಕೊಡುವದೆ ಆದರೆ ಮತ್ತು ಹಿಂದೆ ಕೊಟ್ಟಿರುವ ಸುಮಾರು ಇನ್ನೂರು ಮುನ್ನೂರು ರೂಪಾಯಿಗಳ ಸಾಲಕ್ಕು ಕೂಡ ನಾನು ಜವಾಬ್ದಾರನಾಗುವದಿಲ್ಲ. ಮತ್ತು ನನ್ನ ಸ್ವಯಾರ್ಜಿತದ ಆಸ್ತಿ ವಗೈರೆಗೆ ನನ್ನ ಮಗ ಮತ್ತು ಇತರೆ ಸಾಲ ವಗೈರೆ ಕೊಟ್ಟಿರುವ ಯಾರಾದರೂ ಕೂಡ ನನ್ನ ಸ್ವಯಾರ್ಜಿತ ಆಸ್ತಿ ಮೇಲೆ ದಾವಾ ನಡಿಸುವದಕ್ಕೆ ಯಾರಿಗೂ ಹಕ್ಕು ಇರುವದಿಲ್ಲವಾಗಿ ಎಲ್ಲರಿಗೂ ಈ ನೋಟಿಸು ಮೂಲಕ ಎಚ್ಚರಿಸಲ್ಪಟ್ಟಿದೆ.

ತಾರೀಖು 14ನೆ ಜೂ 1909. ಕಲ್ಲಪ್ಪ ರುಜು.